143

ಭಕ್ತ ಪ್ರಹ್ಲಾದ

(ಪೌರಾಣಿಕ ಏಕಾಂಕ ನಾಟಕ)

*

ರಚಯಿತರು:

ಶ್ರೀ। ಎ. ವಿ. ಮಯ್ಯ,

ಬಂಟ್ವಾಳ.

1957.

ಒಂದಾಣೆ ಮಾಲೆ

ಇಪ್ಪತ್ತೆಂಟು ಏಕಾಂಕ ನಾಟಕಗಳು.

(ಕೆಲವು 16+4 ಪುಟಗಳು; ಮತ್ತೆ ಕೆಲವು 20+4 ಪುಟಗಳು)

'ಒಂದಾಣೆ ಮಾಲೆ'ಯಲ್ಲಿ ಪ್ರಕಟವಾದ ಇಪ್ಪತ್ತೊಂಭತ್ತು ಏಕಾಂಕ ನಾಟಕಗಳಲ್ಲಿ ಈ ಕೆಳಗಿನವು (ಇಪ್ಪತ್ತೆಂಟು) ದೊರೆವುವು

೧	ನಾರೀಶ್ವರರು (ಪ್ರಹಸನ)	ಕುಡ್ಪಿ ವಾಸುದೇವ ಶೆಣೈ.
೨	ಬಾಬಿಗೆ ಬಾಸಿಂಗ ,,	,, ,, ,,
೩	ಸತ್ಯವಂತ ಬಾಬಿ ,,	,, ,, ,,
೪	ಮರ್ಜಿ ,,	ಡಿ। ಎಮ್. ಎನ್. ಕಾಮತ್.
೫	ಸತೀ ಸಾವಿತ್ರಿ (ಪೌರಾಣಿಕ)	ಶ್ರೀ। ಪಿ. ವೆಂಕಟ್ರಮಣ ಭಟ್ಟ.
೬	ಅಕಾಂಡ ತಾಂಡವ (ರೇಡಿಯೊ ನಾಟಕ)	ಶ್ರೀ। ಬಿ. ದಾಮೋದರ ಬಾಳಿಗ, ಬಿ ಎ
೭	ಮೀರಾಬಾಯಿ (ಐತಿಹಾಸಿಕ)	ಶ್ರೀ। ಸಂ. ಜ. ರಾವ್.
೮	ಚುಟ್ಟ ಬಿಟ್ಟ ದಿಟ್ಟ (ಪ್ರಹಸನ)	ಡಾ। ಎಸ್. ಪಿ. ಭಟ್.
೯	ಜರಾಸಂಧ ವಧೆ (ಪೌರಾಣಿಕ)	ಶ್ರೀ। ಕೆ. ಬಿ. ಮಯ್ಯ.
೧೦	ಸತ್ಯಹರಿಶ್ಚಂದ್ರ (ಪೌರಾಣಿಕ)	ಶ್ರೀ। ಪಿ. ವೆಂಕಟ್ರಮಣ ಭಟ್ಟ.
೧೧	ಮಾಯಾಮೃಗ (,,)	ಶ್ರೀ। ಎ. ವಿ. ಮಯ್ಯ.
೧೨	ಸತೀವೃಂದಾ (,,)	ಶ್ರೀ। ಕೆ. ಸುಭಾಷಚಂದ್ರ ಶೆಣೈ.
೧೩	ಗೌತಮನ ಗೃಹತ್ಯಾಗ, ಸಿದ್ಧಾರ್ಥನ ಕಾರುಣ್ಯ	ಶ್ರೀ। ಎಲ್. ಎಸ್. ನಾಯಕ್.
೧೪	ಪುನರುಜ್ಜೀವನ (ಸಾಮಾಜಿಕ)	ಶ್ರೀ। ಗೋವಿಂದ ಭಟ್ಟ.
೧೫	ಸ್ವಾತಂತ್ರ್ಯ (,,)	ಶ್ರೀ। ಕೆ. ಎನ್. ಭಟ್, ಶಿರಾಡಿಪಾಲ್.
೧೬	ಭಕ್ತ ಕುಚೇಲ (ಪೌರಾಣಿಕ)	ಶ್ರೀ। ಅಂಬಾತನಯ.
೧೭	ಮಡ್ವೆ ಅವಾಂತರ (ಪ್ರಹಸನ)	ಅಷ್ಟಾವಕ್ರ.
೧೮	ಗ್ರಾಮಸ್ವಾತಂತ್ರ್ಯ ,,	ಶ್ರೀ। ಎ. ವಿ. ಮಯ್ಯ.
೧೯	ಭಕ್ತ ಧ್ರುವ (ಪೌರಾಣಿಕ)	ಶ್ರೀ। ಸುಬ್ರಾಯ.
೨೦	ಬೇಡನ ಮಗಳು ,,	ಶ್ರೀ। ವೆಂಕಟರಾಜ ಪುಣಿಂಚತ್ತಾಯ.
೨೧	ಪುರಂದರದಾಸರು (ಐತಿಹಾಸಿಕ)	ಬಿ. ಪದ್ಮನಾಭ ಸೋಮಯಾಜಿ.
೨೨	ವೀರಾಗ್ರಣಿ ಕರ್ಣ (ಪೌರಾಣಿಕ)	ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೨೩	ಕುಶ-ಲವ ,,	ಶ್ರೀ। ಬಿ. ಈಶ್ವರಯ್ಯ.
೨೪	ಅಕ್ಷಯಪಾತ್ರೆ (ಸಾಮಾಜಿಕ)	ಶ್ರೀ। ಟಿ. ಚಂದ್ರರಾಜ ಸೆಟ್ಟಿ
೨೫	ವೈರಾಗ್ಯನಿಧಿ (ತರಂಗರೂಪಕ)	ಶ್ರೀ। ಕೆ. ಎಸ್. ಶರ್ಮ, ವಿದ್ವಾನ್.
೨೬	ಭರತನ ಬಂಧುಪ್ರೇಮ (ಪೌರಾಣಿಕ)	ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೨೭.	ಮಹಾತ್ಮಾ ಉದಂಕ	ಶ್ರೀ। ಮಣಿಲ 'ಶಿವಶಂಕರ', ಪುಣಚಾ.
೨೮.	ಭಕ್ತ ಪ್ರಹ್ಲಾದ (ಪೌರಾಣಿಕ)	ಶ್ರೀ। ಎ. ವಿ. ಮಯ್ಯ.

ಒಂದಾಣೆ ಮಾಲೆ

ಪ್ರಭಾತ ಆಫೀಸು :: ರಥಬೀದಿ :: ಮಂಗಳೂರು-೧.

ಭಕ್ತ ಪ್ರಹ್ಲಾದ

ಪಾತ್ರಗಳು:

● ನಾರದ ● ಕಯಾದು ● ಗುರುಗಳು ● ಹಿರಣ್ಯಕಶಿಪು (ರಾಜ) ● ಮಂತ್ರಿ ● ನರ್ತಕಿಯರು ● ಪ್ರಹ್ಲಾದ ● ಬಾಲಕರು ● ನೃಸಿಂಹ.

★

ದೃಶ್ಯ ೧

(ಬೀದಿ:— ನಾರದರು ಹರಿನಾಮ ಸ್ಮರಣೆ ಮಾಡುತ್ತಾ ಪ್ರವೇಶಿಸುವರು.)

ನಾರದ: (ಸ್ವಗತ) ನಾರಾಯಣ! ಜಗತ್ತಿನ ಏಳಿಗೆಗಾಗಿ ದುಡಿಯುವವರಿಗೆ ವಿರಾಮವೆಲ್ಲಿಯದು? ಸ್ವಾರ್ಥದ ಲವಲೇಶವಿಲ್ಲದೆ ಪ್ರತಿಯೊಬ್ಬರೂ ಸಮಾಜದ ಏಳಿಗೆಗಾಗಿ ದುಡಿಯಹೊರಟರೆ, ಭೂಲೋಕವೇ ಸ್ವರ್ಗವೆನಿಸದೇ? ಮಾನವಕೋಟಿಯ ದುಃಖಹರಣವಾಗದೇ? ಅದನ್ನೇ ಜಗತ್ತಿಗೆ ಪ್ರದರ್ಶಿಸಲೋಸುಗವೋ ಎಂಬಂತೆ ಭಗವಂತನು ಭಕ್ತರ ಉದ್ಧಾರಕ್ಕಾಗಿ ಎಷ್ಟೆಲ್ಲಾ ಕಷ್ಟಗಳನ್ನು ಸಹಿಸುತ್ತಿರುವನು! ಒಮ್ಮೆ ಕೂರ್ಮವಾದನು.... ಮತ್ತೊಮ್ಮೆ ಮತ್ಸ್ಯವಾದನು. ಇನ್ನು ಏನೆಲ್ಲಾ ಆಗಲಿದೆಯೋ? ಹೇಗೂ ಇರಲಿ. ಅಜ್ಜನ ಆಜ್ಞೆ.........ಅದರಂತೆ ಈಗಲೇ ಶೋಣಿತಪುರದ ಕಡೆಗೆ ಪ್ರಯಾಣಬೆಳೆಸಬೇಕು. ಆತನ ಮಗನಿಂದಲೇ ಹಿರಣ್ಯನನ್ನು ಕೊಲ್ಲಿಸುವ ಹಂಚಿಕೆಯನ್ನು ಹೂಡಲೇಬೇಕಾಗಿದೆ. ಬಾಯಿಮಾತಿನಿಂದ ಕಾಲಹರಣ ಮಾಡದೆ, ಕಾರ್ಯವನ್ನು ಸಾಧಿಸಬೇಕಾಗಿದೆ. ಅನ್ಯರ ಮನಸ್ಸನ್ನು ತನ್ನ ಕಡೆಗೆ ಸೆಳೆಯುವ ಶಕ್ತಿಯುಳ್ಳ ವೀಣೆಯನ್ನು ಹೆಗಲಲ್ಲಿ ಧರಿಸಿಕೊಂಡು ಒಂದು ನವೀನ ನಾಟಕದ ಪೀಠಿಕೆಯನ್ನು ರಚಿಸುವ ಕಾರ್ಯಕ್ಕಾಗಿ ತೆರಳಬೇಕಾಗಿದೆ. ಭಗವಾನ್! ಲೋಕಶಾಂತಿಸ್ಥಾಪನೆಯ ಈ ಮಹತ್ಕಾರ್ಯದಲ್ಲಿ ನನಗೆ ಜಯವನ್ನು ಕರುಣಿಸು! ನಾರಾಯಣ!

(ಹಾಡುತ್ತಾ ತೆರಳುವನು.)

ದೃಶ್ಯ ೨

(ಕಯಾದುವಿನ ಅಂತಃಪುರ. ಕಯಾದು ಅತ್ತಿತ್ತ ಚಲಿಸುತ್ತಿರುವಾಗ ಹರಿನಾಮಸ್ಮರಣೆ ಕೇಳಿಸುವುದು.)

ಕಯಾದು: ಅದೇನು ಕೇಳಿಸುತ್ತಿದೆ? ವೀಣಾನಾದ! ಹರಿನಾಮಸ್ಮರಣೆ! ಯಾರಿರಬಹುದು? ಹಾಂ, ನಾರದರೇ? ಅವರೇ ಬಂದರಲ್ಲ!

(ನಾರದರು 'ನಾರಾಯಣ' ಎನ್ನುತ್ತ ಪ್ರವೇಶಿಸುವರು.)

ಕಯಾದು: ನಾರದ ಮಹಾಮುನಿಗಳೇ, ವಂದಿಸುವೆನು!

ನಾರದ: ನಾರಾಯಣ.... ಏಳು!

ಕಯಾದು: (ಎದ್ದು) ಪಾವನ ಮೂರುತಿಗಳೇ, ಇಲ್ಲಿ ಆಸೀನರಾಗಬೇಕು. ದೂರದಿಂದ ಆಗಮಿಸಿದಂತೆ ತೋರುತ್ತಿದೆ ಮುನಿವರ್ಯರೇ, ಸದಾ ಹದಿನಾಲ್ಕು ಲೋಕಗಳನ್ನು ಸಂಚರಿಸುತ್ತ, ಕಲ್ಯಾಣಸಾಧಿಸುವ ತಾವು, ಕಲ್ಯಾಣಮಯವಾಗಿಯೇ ಇರುವ ಇಲ್ಲಿಗೆ ಬರಲು ಕಾರಣವೇನು? ಅದರಲ್ಲಿಯೂ ಮಾನಿನಿಯೋರ್ವಳ ಮಂದಿರದ ಕಡೆಗೆ ಬಂದಿರೆನ್ನುವಾಗ, ಏನೋ ಬಹಳ ವಿಶೇಷವಿರಬೇಕೆಂದು ಅನಿಸುತ್ತದೆ. ದಯಮಾಡಿ ತಿಳಿಸೋಣಾಗಲಿ!

ನಾರದ: ಮಹಾರಾಜ್ಞಿ! ಮಹತ್ವದ ಕಾರಣವಿದ್ದೇ ಬಂದಿರುವೆನು. ನೀನೊಬ್ಬಳೇ ಇರುವ ಈ ಭವನಕ್ಕೆ ಬಂದುದಕ್ಕಾಗಿ ಕ್ಷಮಿಸು.

ಕಯಾದು: ಅಂತಹ ವಿಚಾರವಾದರೂ ಅದೇನಿರಬಹುದು ಪೂಜ್ಯರೇ?

ನಾರದ: ಕಯಾದು, ನಾನು ಕಾರ್ಯಾಂತರದಿಂದ ವೈಕುಂಠಕ್ಕೆ ಹೋಗಿರಲು ಶ್ರೀಮನ್ನಾರಾಯಣನು ನಿನ್ನಲ್ಲಿ ಹೇಳುವಂತೆ ಒಂದೆರಡು ನುಡಿಗಳನ್ನು ಹೇಳಿರುವನು.

ಕಯಾದು: ಹರಿಯು ಹರಸಿ ಕಳಿಸಿದ ವಚನಗಳಾವುವು ಮಾನ್ಯರೇ?

ನಾರದ: (ಕಿವಿಯಲ್ಲಿ) ನೀನೂ ನಿನ್ನ ಪತಿಯೂ ಏಕಾಂತದಲ್ಲಿರುವಾಗ ಎಲ್ಲ ಚಿಂತೆಗಳನ್ನು ಮರೆತು, ಹರಿಸ್ಮರಣೆ ಮಾಡಬೇಕೆಂದು ಶ್ರೀಮನ್ನಾರಾಯಣನು ಆಜ್ಞಾಪಿಸಿರುವನು.

ಕಯಾದು: ಅದರ ಫಲ?

ನಾರದ: ಸುಫಲವೇ! ನಿನ್ನ ಉದರದಲ್ಲಿ ಹರಿಭಕ್ತನೋರ್ವನು ಜನನಕ್ಕೆ ಬರುವನು.

ಕಯಾದು: ಮಹಾಮಹಿಮರೇ, ಆಗಲಿ! ಸಕಲವೂ ಸರ್ವಾತ್ಮಕನ ಲೀಲೆ!

ನಾರದ: ಕಯಾದು, ಮರೆಯಬೇಡ. ಪರಮಾತ್ಮನೇ ಆಡಿದ ನುಡಿಗಳಿವು. ನಾನಿನ್ನು ಹೊರಡುವೆನು.

ಕಯಾದು: ಮುನಿವರ್ಯರಿಗೆ ಶಿರಬಾಗಿರುವೆನು! (ವಂದಿಸುವಳು.)

ನಾರದ: (ಆಶೀರ್ವದಿಸುತ್ತ) ನಾರಾಯಣ! ಬೇಗನೇ ಹರಿಶರಣನೋರ್ವನು ನಿನ್ನಲ್ಲಿ ಜನನಕ್ಕೆ ಬರಲಿ! (ಹೋಗುವನು.)

ದೃಶ್ಯ ೩

(ಬೀದಿ. ಗುರುಗಳ ಪ್ರವೇಶ.)

ಗುರುಗಳು: ಎಷ್ಟೋ ಕೊರತೆಗಳಿದ್ದರೂ ಇದ್ದ ಉದ್ಯೋಗವನ್ನು ಉತ್ತಮವಾದುದೆಂದು ನಂಬಿ ಮನಸ್ಸು ಕೊಟ್ಟು ಕಾರ್ಯನಿರ್ವಹಿಸುವುದು ಪ್ರತಿಯೋರ್ವನ ಕರ್ತವ್ಯವಾಗಿದೆ. ಅದರಲ್ಲಿಂದು ಮುಂದೆ ಕಾಣುವ ಪಂಗಡ ಉಪಾಧ್ಯಾಯರದು. ಉಪಾಧ್ಯಾಯರ ಕೆಲಸವೆಂದರೆ ನಿರ್ಜೀವಿ ವಸ್ತುಗಳೊಂದಿಗೆ ಆಡುವುದಲ್ಲ. ಜೀವವಿರುವ ವಸ್ತುಗಳೊಂದಿಗೆ ವ್ಯವಹಾರ. ಯಾವ ರಾಜನ ಮಗನಿಗಾದರೂ ವಿದ್ಯೆಸಿಗಬೇಕಾದರೆ ಬೇಕು— ಗುರುಗಳು. ಅಂತೆಯೇ ನಮ್ಮ ಒಡೆಯರಾದ ಹಿರಣ್ಯಕಶಿಪುವಿನ ಸುಕುಮಾರನಿಗೆ ಐದು ವರ್ಷಗಳು ತುಂಬಿರುವುದಂತೆ. ಅರಮನೆಯಿಂದ ಆಮಂತ್ರಣ ಬಂದಿದೆ. ಅಲ್ಲಿಗೆ ಸಕಾಲಕ್ಕೆ ಸರಿಯಾಗಿ ತಲುಪಬೇಕಾಗಿದೆ. ಹೊರಟೆ. ರಾಜಾಜ್ಞೆಯಲ್ಲವೆ? (ಹೋಗುವನು.)

ದೃಶ್ಯ ೪

(ಹಿರಣ್ಯಕಶಿಪುವಿನ ರಾಜಾಸ್ಥಾನ. ಮಂಗಳವಾದ್ಯಗಳು ಮೊಳಗುತ್ತಿವೆ. ಹಿರಣ್ಯಕಶಿಪುವು ತನ್ನ ಭಾರ್ಯೆ ಕಯಾದು ಮತ್ತು ಬಾಲಕನಾದ ಪ್ರಹ್ಲಾದನೊಂದಿಗೆ, ಮಂತ್ರಿ ಸೇನಾಪತಿಗಳೊಂದಿಗೆ ಪರಿವಾರ ಸಹಿತ ಪ್ರವೇಶಿಸುವನು. ಸಭಿಕರೆಲ್ಲರೂ ಎದ್ದು, "ಶ್ರೀಮನ್ಮಹಾರಾಜರಿಗೆ ಜಯವಾಗಲಿ!" ಎಂದು ಜಯಕಾರ ಮಾಡುವರು. ಅರಸನು ಆಸೀನನಾದೊಡನೆ ಎಲ್ಲರೂ ಕುಳಿತುಕೊಳ್ಳುವರು.)

ರಾಜ: ಸಭಾಸದರೇ, ಸುಖಮಯವಾದ ಸಂಸಾರ ಸಿಗಬೇಕಾದರೆ ಪೂರ್ವಜನ್ಮದ ಕರ್ಮದಫಲಬೇಕು. ಮೊದಲನೆಯದಾಗಿ ಭೂಮಿ—ಅಖಂಡ

ವಾದ ಭೂಮಂಡಲದ ದೊರೆ ನಾನು. ಸಂಪತ್ತಾದರೋ ಬೇಕಾದಷ್ಟಿದೆ. ಆ ಭಾಗದಲ್ಲಿ ಕೊರತೆಯಿಲ್ಲ. ಇನ್ನು ಸುಂದರಿಯೂ ಸುಗುಣಿಯೂ ಆಗಿರುವ ಪತ್ನಿ ಕಯಾದು, ಪ್ರೇಮದ ಕುಮಾರನಾದ ಪ್ರಹ್ಲಾದ, ಅಸಂಖ್ಯಾತ ಬಂಧುಬಾಂಧವರಿರುವ ನಿಮ್ಮ ಈ ರಾಜನಿಗೆ ಸುಖವಲ್ಲದೆ ಮತ್ತೇನು? ಇಷ್ಟೆಲ್ಲಾ ಇದ್ದ ಬಳಿಕ, ಅದನ್ನು ಯಥೇಚ್ಛವಾಗಿ ಅನುಭವಿಸಲು ಆಯುಷ್ಯವೂ ಆರೋಗ್ಯವೂ ಬೇಕು. ಇಂದು ಜಗತ್ತಿನಲ್ಲಿರುವ ಮಾನವರಿಂದಾಗಲೀ, ದಾನವರಿಂದಾಗಲೀ, ದೇವತೆಗಳಿಂದಾಗಲೀ ನನಗೆ ಮರಣವಿಲ್ಲವೆಂಬ ವರವಿರುವಾಗ ಬೆದರಿಕೆಯೇನು? ಈ ಮಹಾಸಂಪತ್ತು, ಈ ಅಭಯದಾನದ ವರ—ಇದೆಲ್ಲವೂ ನನಗಾಗಿ ಅಲ್ಲ—ನಿಮ್ಮನ್ನು ನ್ಯಾಯವಾಗಿ ಪರಿಪಾಲಿಸಲಿಕ್ಕಾಗಿ ಮಾತ್ರ ನನಗೆ ಅವಶ್ಯ. ರಾಜಭಕ್ತಿಯುಳ್ಳ ಪ್ರಜೆಗಳೇ ನನ್ನ ರಾಜ್ಯದಲ್ಲಿ ತುಂಬಿರುವರು. ಇದನ್ನೆಲ್ಲಾ ಯೋಚಿಸುವಾಗ ನನ್ನಂತಹ ಭಾಗ್ಯವಂತರು ಜಗತ್ತಿನಲ್ಲಿ ಯಾರಿರುವರು? ಪ್ರಜಾಜನರೇ, ಇಂದು ಒಂದು ಮಹತ್ತಾದ ದಿನ. ನಮ್ಮ ಪ್ರಹ್ಲಾದನ ಐದನೇ ಜನ್ಮದಿನ. ಮಂತ್ರಿಶೇಖರನೇ, ಈ ದಿನ ರಾಜ್ಯದಲ್ಲಿ ಎಲ್ಲರೂ ಆನಂದದಿಂದಿರುವಂತೆ ವ್ಯವಸ್ಥೆಗೊಳಿಸಿರುವೆಯಲ್ಲವೇ?

ಮಂತ್ರಿ: ನಮ್ಮ ರಾಜ್ಯದಲ್ಲಿ ಎಲ್ಲರೂ ಆನಂದದಿಂದಲೇ ಇರುವರು, ಪ್ರಭೋ!

ರಾಜ: ಹಾಗಿದ್ದರೆ ಎಲ್ಲಿ ನರ್ತಕಿಯರು?

ನರ್ತಕಿಯರು: (ಪ್ರವೇಶಿಸುತ್ತ) ಮಹಾರಾಜರಿಗೆ ಜಯವಾಗಲಿ.

(ವಂದಿಸುವರು.)

ರಾಜ: ನರ್ತಕಿಯರೇ, ಪೂರ್ಣ ಕಳೆಯೇರಿದ ಸ್ಫೂರ್ತಿಯಿಂದ ನಿಮ್ಮ ನರ್ತನವು ಸಾಗಲಿ! ಪ್ರಹ್ಲಾದನ ಜನ್ಮದಿನೋತ್ಸವದ ಉತ್ಸಾಹವು ಎಲ್ಲೆಡೆಯೂ ತುಂಬಲಿ! (ನರ್ತನವು ಮುಗಿದೊಡನೆ) ಮಂತ್ರಿಯೇ, ನರ್ತನವು ಚಲೋದಾಗಿ ನಡೆಯಿತು. ಈ ನರ್ತಕಿಯರಿಗೆ ಯೋಗ್ಯವಾದ ಬಹುಮಾನಗಳನ್ನು ಕೊಟ್ಟು ಕಳುಹಿಸು.

ಮಂತ್ರಿ: ಮಹದಾಜ್ಞೆ. ನರ್ತಕಿಯರೇ, ಕೋಶಾಧಿಕಾರಿಗಳಿಂದ ಬಹುಮಾನಗಳನ್ನು ಪಡೆದು, ತೆರಳಿರಿ.

ನರ್ತಕಿಯರು: ಹಾಗೆಯೇ ಆಗಲಿ. ಮಹಾರಾಜರಿಗೆ ಜಯವಾಗಲಿ!

(ವಂದಿಸಿ ತೆರಳುವರು.)

ರಾಜ: ಸಚಿವ ಶಿಖಾಮಣಿ! ಈ ದಿನ ನಮ್ಮ ರಾಜ್ಯದಲ್ಲಿ ಯಾವ ರೀತಿಯ ಕೊರತೆಯೂ ಬಾರದಿರಲಿ.

ಮಂತ್ರಿ: ಆಗಲಿ, ಪ್ರಭೋ!

ರಾಜ: ಗುರುಗಳೇ! (ಅಷ್ಟರಲ್ಲಿ ಕುಳಿತಿದ್ದ ಗುರುಗಳು ಎದ್ದು ರಾಜನಿಗೆ ವಂದಿಸುವರು.)

ಗುರು: ಮಹಾರಾಜರಿಗೆ ವಂದನೆ!

ರಾಜ: ಆಚಾರ್ಯರೇ! ಪ್ರತಿವಂದನೆಗಳು. ಆಸೀನರಾಗಿರಿ. ಇಂದಿಗೆ ಮಗನಾದ ಪ್ರಹ್ಲಾದನಿಗೆ ಐದು ವರ್ಷಗಳು ತುಂಬಿದುವು. ಈ ವರೆಗೆ, ಮಕ್ಕಳಿಗೆ ತಕ್ಕದಾದ ಆಟಕೂಟಗಳಲ್ಲಿಯೇ ಕಾಲಕಳೆದುಹಾಯಿತು. ಮಕ್ಕಳಿಗೆ ಐದು ವರ್ಷಗಳಾದೊಡನೆ ಅವರನ್ನು ಗುರುವಿನ ವಶಕ್ಕೊಪ್ಪಿಸುವುದು ಹೆತ್ತವರ ಕರ್ತವ್ಯವು. ಅಂತೆಯೇ ಹಿತನ ಒಲುಮೆಯಿಂದ ಗುಣವಂತನಾಗಿ ಬೆಳೆದ ಈ ಮಗುವನ್ನು ನಿಮ್ಮ ವಶಕ್ಕೊಪ್ಪಿಸುವೆನು. ರಾಜೋಚಿತ ವಿದ್ಯಾಭ್ಯಾಸವನ್ನು ಮಾಡಿಸಿ, ಅತನನ್ನು ವಿದ್ಯಾವಂತನನ್ನಾಗಿ ಮಾಡಿರಿ. (ಪ್ರಹ್ಲಾದನೊಡನೆ) ಕುಮಾರಾ, ಇನ್ನು ನೀನು ಮಗುವಲ್ಲ. ವಿದ್ಯಾರ್ಜನೆ ಮಾಡಬೇಕಾದ ಸಮಯವಿದು. ಇವರೇ ನಿನ್ನ ಗುರುಗಳು. ಇವರೊಂದಿಗೆ ಗುರುಮಠಕ್ಕೆ ಹೋಗಿ ಸರಿಯಾಗಿ ಕಲಿತು, ವಿದ್ಯಾವಂತನಾಗಿ ಮರಳಿ ಬಾ.

ಪ್ರಹ್ಲಾದ: ಅಪ್ಪಾ, ಪ್ರತಿಯೋರ್ವನಿಗೆ ವಿದ್ಯೆ ಕಲಿಯುವುದೆಂದರೆ ಅತಿ ಅಮೂಲ್ಯವಾದುದು. ನನ್ನ ಭಾಗಕ್ಕೆ ಗುರುಗಳೆಂದರೆ ದೇವರಿಗೆ ಸಮಾನ. (ಗುರುಗಳ ಬಳಿಗೆ ಹೋಗಿ) ಗುರುದೇವ, ವಂದಿಸುವೆನು.

ಗುರು: ಪ್ರಹ್ಲಾದ, ಏಳು! ಜ್ಞಾನನಿಧಿಯಾಗಿ ಬಾಳುವಂತೆ ಆ ಹರನು ಅನುಗ್ರಹಿಸಲಿ.

ಪ್ರಹ್ಲಾದ: (ತಾಯಿಯ ಬಳಿಗೆ ಹೋಗಿ) ಅಮ್ಮಾ, ಅಪ್ಪನ ಅಣತಿಯಂತೆ ನಾನಿಂದು ವಿದ್ಯೆ ಸಂಪಾದಿಸಲು ಗುರುಮಠಕ್ಕೆ ತೆರಳಲಿರುವೆನು. ಇದೋ, ನಮಸ್ಕರಿಸುವೆನು. ತಾಯೇ, ಆಶೀರ್ವದಿಸು.

ಕಯಾದು: ಕುಮಾರಾ, ಏಳು! ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಲು ವಿದ್ಯೆಯೆಂಬ ಬೆಳಕನ್ನು ಪಡೆಯಲಿರುವ ನಿನ್ನನ್ನು ಭಗವಂತನು ಕಾಪಾಡಲಿ!

ಪ್ರಹ್ಲಾದ: (ತಂದೆಯೊಡನೆ) ಅಪ್ಪಾ, ವಂದಿಸುವೆನು.

ರಾಜ: ಮಗೂ, ಏಳು! ವಿದ್ಯಾವಂತನಾಗಿ ಬಾಳು! ಗುರುಗಳೇ, ಇನ್ನು ಪ್ರಹ್ಲಾದನು ನಿಮ್ಮವನು. ಆತನ ಏಳಿಗೆಯು ನಿಮ್ಮ ಮೇಲಿದೆ. ಆತನನ್ನು ಕೈಯೆತ್ತಿ ನಿಮ್ಮ ವಶಕ್ಕೊಪ್ಪಿಸಿರುವೆನು.

ಪ್ರಹ್ಲಾದ: (ಸಭೆಗೆ) ಸಭಾಸದರೇ, ಗುರು ಹಿರಿಯರೇ, ನಾನಿಂದು ವಿದ್ಯಾಭ್ಯಾಸ ಆರಂಭಿಸುವ ಮೊದಲು ನಿಮ್ಮ ಆಶೀರ್ವಾದಕ್ಕಾಗಿ ಶಿರ ಬಾಗಿರುವೆನು! (ವಂದಿಸುವನು.)

ಸಭಿಕರು: ರಾಜಕುಮಾರನಿಗೆ ವಿದ್ಯಾದೇವತೆಯು ಅನುಗ್ರಹಿಸಲಿ!

ಗುರು: ಮಹಾರಾಜ! ಇಂದಿನಿಂದ ನಿಮ್ಮ ಮಗನ ಏಳಿಗೆಯ ಭಾರವು ನನ್ನ ಮೇಲೆ. ನನ್ನ ಕರ್ತವ್ಯವನ್ನು ನಾನು ತಪ್ಪದೆ ಪೂರೈಸುವೆನು. ಆದರೆ, ಬೇರೆ ಬೇರೆ ಮನೆಗಳಿಂದ ಬಂದ ಮಕ್ಕಳೊಂದಿಗೆ ವ್ಯವಹಾರವಾದುದರಿಂದ ಎಲ್ಲಾದರೂ ಯಾಗ ಭಾಗದಲ್ಲಾದರೂ ರಾಜಕುಮಾರನಿಗೆ ತೊಂದರೆಗಳುಂಟಾದಲ್ಲಿ ಬಡ ಉಪಾಧ್ಯಾಯನಾದ ನನ್ನನ್ನು ಕ್ಷಮಿಸಬೇಕಾಗಿ ಕೇಳಿಕೊಳ್ಳುವೆನು.

ಮಂತ್ರಿ: ಗುರುಗಳೇ, ಬರೇ ವಿದ್ಯಾಭ್ಯಾಸಕ್ಕಾಗಿ ಮಕ್ಕಳನ್ನು ಗುರುಮಠಕ್ಕೆ ಕಳುಹಿಸುವುದಲ್ಲ. ಓರಗೆಯ ಮಕ್ಕಳೊಡನೆ ಸಮಾನವಾಗಿ ಕಲೆತು ವಿದ್ಯೆ, ಬುದ್ಧಿ, ವಿನಯಾದಿ ಸದ್ಗುಣಗಳ ಸಂಪಾದನೆಗಾಗಿ ಮಕ್ಕಳನ್ನು ಅಲ್ಲಿಗೆ ಕಳುಹಿಸುವುದು. ಆದುದರಿಂದ ಶಾಲೆಯಲ್ಲಿ ರಾಜನ ಮಗ, ಬಡವನ ಮಗನೆಂಬ ಭೇದಭಾವಗಳು ಬರಲೆಡೆಯಿಲ್ಲ.

ಗುರು: ಆಗಲಿ, ತೆರಳುವೆನು.

ಪ್ರಹ್ಲಾದ: (ಕೈಮುಗಿದು) ಅಪ್ಪಾ, ಅಮ್ಮಾ, ನಚ್ಚಿನ ಸಭಾಸದರೇ, ನಾನಿಂದು ಹೋಗಿಬರುವೆನು. (ತೆರಳುವರು.)

ರಾಜ: ಕಯಾದು, ಎಂತಹ ಗುಣರಾಶಿಯು ನಮ್ಮ ಪ್ರಹ್ಲಾದ! ಹಲವು ಬುದ್ಧಿಹೀನ ಮಕ್ಕಳಿದ್ದು ಏನು ಕಾನೇ ಫಲ! ಕುಲವನ್ನು ಬೆಳಗಿಸುವ ಒಂದೇ ಬೆಳಕು ಸಾಕು.

ಕಯಾದು: ಎಲ್ಲವೂ ಪರಮೇಶ್ವರನ ಕೃಪೆ! (ಪರದೆ ಬೀಳುವುದು.)

ದೃಶ್ಯ ೪

(ಬೀದಿ—ಗುರುಗಳು ಪ್ರವೇಶಿಸುವರು.)

ಗುರು: (ಪ್ರವೇಶಿಸುತ್ತಾ) ದೊಡ್ಡವರ ಮಕ್ಕಳಿಗೆ ಕಲಿಸುವುದೆಂದರೆ ಬಹಳ ಕಷ್ಟ. ಅವರ ಹಟ ಅವರು ಬಿಡುವರೇ? ನಾನು ಈ ವರೆಗೆ ಅದೆಷ್ಟೋ ಮಕ್ಕಳಿಗೆ ಕಲಿಸಿದ್ದೇನೆ. ಆದರೆ ಇಂತವನನ್ನು ಈ ವರೆಗೆ ಕಂಡಿರಲಿಲ್ಲ. 'ಹರ'ನೆಂದು ಎಷ್ಟು ಓದಿಸಿದರೂ 'ಹರಿ' ಎನ್ನುವನಲ್ಲ! 'ಹಿರಣ್ಯಾಯ ನಮಃ' ಎಂದೊಡನೆ 'ನಾರಾಯಣಾಯ ನಮಃ!!' ಎನ್ನುವನಲ್ಲ! ಏನುಮಾಡಲಿ? ಇದೆಲ್ಲಿಯಾದರೂ ಅವನ ಅಪ್ಪನಿಗೆ ತಿಳಿದರೆ ಮತ್ತೆ ನಮಗಿಬ್ಬರಿಗೂ ದೇವರೇ ಗತಿ! ಎಷ್ಟು ಹೇಳಿದರೂ ಕೇಳುವವನಲ್ಲ. ಐದು ವರ್ಷದ ಮಕ್ಕಳೆಲ್ಲಾ ಹೀಗಿರುವರೇ? ರಾಜನು ಹರಿಯ ಕಡು ವೈರಿ. ಆತನ ಮಗನೊಬ್ಬ ದೊಡ್ಡ ಹರಿದಾಸನಾದನಲ್ಲ! ನನ್ನ ಶಿಷ್ಯನು ಕುಲಗೇಡಿಯಾದನೇ? ಎಂತಹ ಶಿಕ್ಷೆಗಳನ್ನು ವಿಧಿಸಿದರೂ ಫಲಕಾರಿಯಾಗಲಿಲ್ಲವಲ್ಲ! ಆದುದರಿಂದ ದೂರದಿಂದ ದೂರಕ್ಕೆ ಇರುವುದೇ ಪರಮ ಸುಖ. ಇವನನ್ನು ರಾಜನಿಗೆ ಹಿಂದೆ ಒಪ್ಪಿಸಿ ನನ್ನ ಕಷ್ಟಗಳ ವರದಿಯೊಪ್ಪಿಸಿದರೆ ಮುಗಿಯಿತು. ಮತ್ತೆ ರಾಜನು ನನ್ನನ್ನು ದೂರುವುದು ಬೇಡ. (ತೆರಳುವನು.)

ದೃಶ್ಯ ೫

(ಅರಮನೆ—ರಾಜನು ಅತ್ತಿತ್ತ ತಿರುಗಾಡುತ್ತಾ ಯೋಚನಾಮಗ್ನನಾಗಿರುವನು.)

ರಾಜ: ಸುಗುಣನಿಧಿಯಾದ ಪ್ರಹ್ಲಾದನು ವಿದ್ಯಾರ್ಥಿಯಾಗಿ ಗುರುಕುಲದಲ್ಲಿರುವನು. ಆತನಿಲ್ಲದೆ ಮನೆಯೇ ಬರಿದಾಗಿ ಕಾಣಿಸುತ್ತಿದೆ! ಮನೆಯೆಂದಾಗಬೇಕಾದರೆ ಆಡುವವರು ಆಡಬೇಕು; ಓಡುವವರು ಓಡಬೇಕು. ನೋಡುವವರು ನೋಡಲೇ ಬೇಕು. ಇಲ್ಲವಾದರೆ ಮನೆಗೆ ಅಂದವಿರದು. (ಅಷ್ಟರಲ್ಲಿ ಗುರುಶಿಷ್ಯರು ಪ್ರವೇಶಿಸುವರು.) ಹಾಂ............ಇದೇನು? ಪ್ರಹ್ಲಾದನು ಮರಳಿ ಬರುತಿದ್ದಾನಲ್ಲ! ಏನೋ ಅರಮನೆಯ ನೆನಪಾಗಿರಬೇಕು. ಸಣ್ಣವನಲ್ಲವೇ?

ಪ್ರಹ್ಲಾದ: ಅಪ್ಪಾ.........…

ರಾಜ: ಕಂದ.........ಈ ಕಡೆಗೆ ಬಾ............ಏನು ಕಾರಣ ಬಂದೆ? ಗುರುಮಠದಲ್ಲಿ ಏನೆಲ್ಲಾ ಕಲಿತೆ? ಮಾತಾಡು, ಮುಗುಳುನಗುತ್ತಾ ನಿಂತಿರುವುದೇಕೆ?

ಪ್ರಹ್ಲಾದ: ಅಪ್ಪಾ, ನಾನು ಶಾಲೆಯಲ್ಲಿ ತುಂಬಾ ಕಲಿತೆನು. ನನ್ನ ಗುರುಗಳು ಬಹಳ ಒಳ್ಳೆಯವರು. ಅವರು ನನಗೆ ಹರನೆಂದು ಬರೆಯು ವಂತೆ ಹೇಳಿದರು.

ರಾಜ: ಹಾಗೆಯೇ ಬರೆದೆಯಾ? ಹರನು ನಮ್ಮ ಕುಲದೇವನು.

ಪ್ರಹ್ಲಾದ: ಹೌದು....ಬರೆದೆನು...."ಹರಿ" ಎಂದು ಬರೆದೆನು.

ರಾಜ: ಏನು? ಸುಳ್ಳಾಡುವೆಯಾ?

ಪ್ರಹ್ಲಾದ: ಇಲ್ಲ. ಇದು ಸುಳ್ಳಲ್ಲ. ನಿಜವಾಗಿಯೂ "ಹರಿ" ಎಂದೇ ಬರೆದೆ.

ರಾಜ: ಪ್ರಹ್ಲಾದ, ಹಾಗಾಡಬೇಡ. ಹರನು ನಮ್ಮೆಲ್ಲರನ್ನು ಸಲಹುವ ಕರುಣಾಮೂರ್ತಿಯು. ಹರಿಯು ಹಾಗಲ್ಲ. ನಿನ್ನ ಚಿಕ್ಕಪ್ಪನನ್ನು ಕೊಂದ ಕೊಲೆಪಾತಕಿಯು.

ಪ್ರಹ್ಲಾದ: ಅಪ್ಪಾ, ಹರಿಯು ಚಿಕ್ಕಪ್ಪನನ್ನು ಕೊಂದುದು ಅವರೆಸಗಿದ ಪಾಪಕೃತ್ಯಗಳಿಗಾಗಿ ದುಷ್ಟರನ್ನು ಕೊಲ್ಲುವುದೇ ಆತನ ಕೆಲಸ.

ರಾಜ: ಹಾಗೆನ್ನಬೇಡ. ಹರಿಯು ನನ್ನ ವೈರಿ. ಅವನ ಹೆಸರನ್ನೆತ್ತ ದಿರು,

ಪ್ರಹ್ಲಾದ: ಜನಕ, ಇಲ್ಲ....ಹರಿಯು ವೈರಿ....ಯಾರಿಗೆ ಗೊತ್ತೇ? ದುಷ್ಟರಿಗೆ....ಆತನನ್ನು ಶಿಷ್ಟಪರಿಪಾಲಕನೆಂದು ಕರೆಯುವರು. ಒಮ್ಮೆ "ಹರಿ" ಎಂದು ಆತನನ್ನು ಸ್ಮರಿಸು!

ರಾಜ: ಮುಚ್ಚುಬಾಯಿ! ಹರಿಯೆಂದು ಕೂಗಬೇಡ. ಹರನೆನ್ನು! ಎಲ್ಲಿಯಾದರೂ ಹಟಮಾಡಿದರೆ ಕೊಂದೇನು!

ಪ್ರಹ್ಲಾದ: (ಮುಗುಳುನಕ್ಕು) ಕೊಲ್ಲುವುದು?....ಯಾರನ್ನು?.... ಹರಿನಾಮ ಕವಚವಿರುವ ನನ್ನನ್ನು ಕೊಲ್ಲುವಿರಾ?

ರಾಜ: ಖಂಡಿತ ಕೊಲ್ಲುವೆನು! (ಹಲ್ಲು ಕಡಿಯುತ್ತಾ) ನೀಚ, ಅವ ನನ್ನು ಏಕೆ ಈ ರೀತಿ ಪೂಜಿಸುವೆ?

ಪ್ರಹ್ಲಾದ: ಅಪ್ಪಾ, ಹಿಂದಿನ ಜನ್ಮಗಳಲ್ಲಿ ಶ್ರೀಹರಿಯನ್ನು ಧ್ಯಾನಿಸದೆ ಮನಬಂದಂತೆ ಕಾಲಕಳೆದುದರ ಫಲವಾಗಿ ಪುನಃ ಪುನಃ ಜಗತ್ತಿನಲ್ಲಿ ಜನ್ಮ ವೆತ್ತಿ ಬಳಲುತ್ತಿರುವೆನು. ಭೂತಕಾಲದ ವಿಚಾರಗಳನ್ನು ವಿಮರ್ಶಿಸಿ ಭವಿಷ್ಯತ್ತಿನಲ್ಲಿ ಸರಿಯಾಗಿ ನಡೆಯಲು ಪ್ರಯತ್ನಿಸುವುದೇ ಮಾನವನ

ಧರ್ಮ. ಅಂತೆಯೇ ಇನ್ನಾದರೂ ಆ ದಯಾಮಯನನ್ನು ಪೂಜಿಸಿ ಜನನ ಮರಣಗಳಿಲ್ಲದ ಕೈವಲ್ಯಪದವಿಯನ್ನು ಪಡೆಯಬೇಕೆಂಬ ಆಶೆಯಿಂದ ಆತನ ಪುಣ್ಯನಾಮಸ್ಮರಣೆ ಮಾಡುತ್ತಿರುವೆನು! ಅದನ್ನು ಬಿಡಲಾರೆ!

ರಾಜ: (ಕೋಪದಿಂದ) ಎಂತಹ ಮಾತುಗಳು? ತಂದೆಯ ಎದುರಿಗೆ ನಿಂತು ಮನಬಂದಂತೆ ಮಾತಾಡಬೇಕಾದರೆ ಎಷ್ಟೊಂದು ಧೈರ್ಯ ಬೇಕು! ಇದನ್ನೇ ಕೋಣನಂತಿರುವ ಈ ಗುರುವು ಕಲಿಸಿದ್ದಿರಬೇಕು. (ಗುರುಗಳೊಂದಿಗೆ) ಎಲೋ! ಇವನು ಹಟಮಾರಿತನದಿಂದ ಹರನೆನ್ನದೆ ‘ಹರಿ’ ಎಂದೇ ವಾದಿಸುತ್ತಿರುವನಲ್ಲ! ಚಿಕ್ಕವನ ಮನಸ್ಸು ಹೀಗೆ ಪರಿವರ್ತನ ಹೊಂದಬೇಕಾದಲ್ಲಿ ಇದು ನೀನು ಕಲಿಸಿದ ವಿದ್ಯೆಯ ಪ್ರಭಾವ! ನನ್ನ ಮಗನಿಗೆ ನೀನು ಹರನೆಂದು ಕಲಿಸದೆ, ಆತನ ಮನಸ್ಸಿನಲ್ಲಿ ‘ಹರಿ’ ವಿಚಾರದ ಬೀಜವನ್ನು ಮೊಳಕೆ ಬರಿಸಿದೆಯೋ ಇನ್ನು ನಾನು ಸಹಿಸಲಾರೆನು! ಇದೆಲ್ಲವೂ ನಿನ್ನ ಕುತಂತ್ರ. ಈಗಲೇ ನಿನ್ನ ತಲೆಯನ್ನು ಹಾರಿಸುವೆನು! (ಖಡ್ಗವನ್ನೆತ್ತಲು ಹೋಗುವಾಗ ಪ್ರಹ್ಲಾದನು ತಡೆಯುವನು.)

ಪ್ರಹ್ಲಾದ: ಅಪ್ಪಾ, ಇದೇನು ಮಾಡುತ್ತಿರುವಿರಿ? ಸಿಟ್ಟುಬಂತೆಂದು ಸಿಕ್ಕಿದವರನ್ನು ವಿಚಾರಿಸದೆ ಕೊಲ್ಲುವುದೆ? ಇದು ರಾಜಧರ್ಮವೇ? ಗುರುಗಳ ತಪ್ಪಿಲ್ಲ. ಅವರು ‘ಹರಿ’ ಎಂದು ಕಲಿಸಿಲ್ಲ. ನಾನೇ ಅದನ್ನು ಕಲಿತೆನು. ನಾನು ಗೈದ ಅಪರಾಧಕ್ಕಾಗಿ ನನ್ನ ಪೂಜ್ಯ ಗುರುಗಳ ಮೇಲೆ ಕೈ ಮಾಡದಿರಿ!

ರಾಜ: ಪ್ರಹ್ಲಾದ, ಮುಚ್ಚುಬಾಯಿ! ಒಂದೆರಡು ದಿನ ಶಾಲೆಗೆ ಹೋದೊಡನೆ ಪಿತ್ಥ ನೆತ್ತಿಗೇರಿತೆ? ಹುಂ....ಗುರುಗಳ ತಪ್ಪಿಲ್ಲ! ಅಲ್ಲವೇ? ಹೋಗಲಿ....ನೀನೆನ್ನ ಮಗನೇ....ಹರವಿರೋಧಿಯಾದ ನಿನ್ನನ್ನೇ ಕೊಲ್ಲುವೆನು. (ಖಡ್ಗವನ್ನೆತ್ತುವನು.)

ಗುರು: ರಾಜಾ! ಸೈರಿಸು. ಕೋಪವೆಂಬುದು ಪಾಪದ ನೆಲೆಗಟ್ಟು. ಮಗನನ್ನು....ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನು ಕೊಲ್ಲುವೆಯಾ? ನಿನ್ನಂತಹ ವೀರರಿಗೆ, ಸಾಧುವಾದ ನಿನ್ನ ಮಗನನ್ನು ವಧಿಸುವುದು ದೊಡ್ಡ ಕಾರ್ಯವೇನೂ ಅಲ್ಲ, ಭೂಷಣವೂ ಅಲ್ಲ. ಹುಡುಗನನ್ನು ಬಿಡು. ಒಂದು ಮಾತನ್ನು ಕೇಳು.

ರಾಜ: ಏನದು?

ಗುರು. ರಾಜಾ, ಮಕ್ಕಳು ಹುಟ್ಟುವಾಗ್ಗೆ ಎಲ್ಲವನ್ನೂ ಕಲಿತಿರುವುದಿಲ್ಲ. ಬಾಲ್ಯದಲ್ಲಿ ಎಲ್ಲರಲ್ಲೂ ಹಟಮಾರಿತನ, ತಂಟೆಗಳೇ ಮೊದಲಾದ ಚಟುವಟಿಕೆಗಳಿರುವುದು ಸ್ವಾಭಾವಿಕ. ಅವುಗಳನ್ನು ತಿದ್ದಿ ಸರಿಪಡಿಸುವುದು ನಮ್ಮ ಕರ್ತವ್ಯ. ಆದುದರಿಂದ ಪ್ರಹ್ಲಾದನನ್ನು ಇನ್ನೊಮ್ಮೆ ನನ್ನೊಡನೆ ಕಳುಹಿಸು. ಪ್ರಯತ್ನಿಸುವೆನು. ಸಾಧ್ಯವಾದಷ್ಟು ತಿದ್ದುವೆನು.

ರಾಜ: ಆಗಲಿ....ಹೊರಡಿರಿಲ್ಲಿಂದ....(ಹೋಗುವರು) ಹರಿಯಂತೆ! ಹರಿ!! ಎಲ್ಲಿಂದ ಬಂತು ಪ್ರಹ್ಲಾದನಿಗೆ ಈ ತರದ ಬುದ್ಧಿ? ಸಿಂಹದ ಹೊಟ್ಟೆಯಿಂದ ನರಿಯು ಬಂದಹಾಗೆ, ಹರನ ಭಕ್ತನಾದ ನನ್ನ ಮಗನಿಗೆ ಹರಿಯ ಹುಚ್ಚು ಏಕೆ ಹಿಡಿಯಿತು? ಇರಲಿ; ನೋಡುವಾ. ಕಾಲಕ್ರಮೇಣ ಸರಿದಾರಿಗೆ ಬಂದಾನು! (ಹೋಗುವನು.)

ದೃಶ್ಯ ೬

(ಬೀದಿ—ಗುರುಗಳೂ ಪ್ರಹ್ಲಾದನೂ ಪ್ರವೇಶಿಸುವರು.)

ಗುರು: ಮಗೂ ಪ್ರಹ್ಲಾದ, ಗುರುಹಿರಿಯರ ಮಾತನ್ನು ಕೇಳಿ ಅದರಂತೆಯೇ ನಡೆಯಬೇಕು. ತಂದೆಯ ಮಾತನ್ನು ಒಂದಿಷ್ಟೂ ಮೀರಿ ನಡೆಯಬಾರದು. ಹಟಮಾರಿತನವು ಕೇಡಿಗೆ ದಾರಿ. ಆದುದರಿಂದ ಹರಿಯನ್ನು ಮರೆತುಬಿಡು. ಹರನ ಸ್ಮರಣೆ ಮಾಡು.

ಪ್ರಹ್ಲಾದ: (ನಗುತ್ತ) ಗುರುಗಳೇ, ಎಂತಹ ಮಾತುಗಳಿವು? ಗುರುಹಿರಿಯರ ಮಾತುಗಳನ್ನು ಕೇಳಬೇಕು........ನಿಜ, ಆದರೆ ಹೇಳುವವರೂ ಆಲೋಚನೆ ಮಾಡಬೇಕು........ಬಾವಿಗೆ ಹಾರೆಂದು ಕಾರಣವಿಲ್ಲದೆ ಹೇಳಿದರೆ ಹಾರುವುದು ಸರಿಯೇ? ನ್ಯಾಯವಾದ ವಿಚಾರಗಳ ಸಾಧನೆಗೆ ಹಟದ ಅಗತ್ಯವೂ ಇದೆ. ಗಾಳಿ ಬಂದಹಾಗೆ ಕೊಡೆ ತಿರುಗಿಸುವುದು ಸರಿಯೇ? ಅನ್ಯಾಯಮಾಡಿಕೊಂಡು ಭೂಮಿಗೆ ಭಾರವಾಗಿದ್ದು ಜೀವಿಸುವುದಕ್ಕಿಂತ ಸಾಯುವುದೇ ನನಗೆ ಲೇಸು. ಹರಿಯೇ ನನ್ನ ದೇವರು. ಆತನನ್ನು ಬಿಡಲಾರೆ.

ಗುರು: ಪ್ರಹ್ಲಾದ, ಹಾಳಾಗಬೇಡ. ನಿನ್ನಿಂದಾಗಿ ನನ್ನನ್ನೂ ಹಾಳುಮಾಡಬೇಡ.

ಪ್ರಹ್ಲಾದ: ಗುರುದೇವ, ನನ್ನಿಂದಾಗಿ ನಿಮ್ಮ ಏಳಿಗೆಯೇ ಹೊರತು ಅವನತಿಯಾಗದು.

ಗುರು: ರಾಜಕುಮಾರ, ಗರ್ವ ಹಾಗೂ ಹಟವನ್ನು ದಯಮಾಡಿ ತ್ಯಜಿಸು. ಸಾರಿ ಹೇಳುತ್ತೇನೆ. ಇನ್ನೆರಡು ದಿನ ನೋಡುವೆನು. ಇನ್ನೂ ಹೀಗೆಯೇ ಮುಂದುವರಿದರೆ ನಿನ್ನನ್ನು ಪುನಃ ಕರೆದುಕೊಂಡು ಹೋಗಿ ನಿನ್ನ ಅಪ್ಪನಿಗೆ ಒಪ್ಪಿಸುವೆನು. ಅಲ್ಲಿ ಆತನ ಉಗ್ರಕೋಪಕ್ಕೆ ನೀನು ಬಲಿಯಾಗ ಬೇಕಾದೀತು.

ಪ್ರಹ್ಲಾದ: ಆಗಲಿ, ಎಲ್ಲವೂ ಆ ಲೀಲಾವಿನೋದಿಯ ಲೀಲೆ.

(ಹೋಗುವರು)

ದೃಶ್ಯ ೭

(ಅರಮನೆ. ಹಿರಣ್ಯಕಶಿಪುವು ಅತ್ತಿತ್ತ ಯೋಚಿಸುತ್ತಾ ತಿರುಗಾಡುತ್ತಿರುವನು. ಅಷ್ಟರಲ್ಲಿ ಗುರುಗಳು ಮತ್ತು ಪ್ರಹ್ಲಾದನು ಪ್ರವೇಶಿಸುವರು.)

ಗುರು: ಮಹರಾಜಾಧಿರಾಜಾ........!

ರಾಜ: ಪ್ರಹ್ಲಾದ! ಏನು ಬಂದೆ?

ಗುರು: ಹೊರೆಯೇ, ನಿನ್ನ ಮಗನ ಸುದ್ದಿ ಬೇಡ. ಇಂತಹ ಎರಡು ಮಕ್ಕಳು ಸೇರಿದರೆ ಉಪಾಧ್ಯಾಯರ ಗತಿ ನೆಟ್ಟಗೆ! ಏನು ಹೇಳಿದರೂ ಕೇಳದೆ ಮನಬಂದಂತೆ "ಹರಿ ಹರಿ" ಎಂದೇ ನುಡಿಯುತ್ತಿರುವನು. ಹಟಮಾರಿತನದ ■ ನಿನ್ನ ಮಗನನ್ನು ನೀನೇ ಒಪ್ಪಿಸಿಕೊ.

ರಾಜ: ಗುರುಗಳೇ, ಪ್ರಹ್ಲಾದನ ಛಲವು ಮಿತಿ ಮೀರಿ ಹೋಯಿತೇ? ನಿಜವೇ ಇದು?

ಗುರು: ಸುಳ್ಳಲ್ಲ. ಯಾವ ಶಿಕ್ಷೆ ಬೇಕಾದರೂ ಕೊಡು, ಮಹಾರಾಯ! ಊರು ಬೇಕಾದರೂ ಬಿಡಲು ಸಿದ್ಧನಿದ್ದೇನೆ. ದೊಡ್ಡವರ ಮಕ್ಕಳಿಗೆ ಅಕ್ಷರ ಕಲಿಸುವ ಕೆಲಸ ಬೇಡ.

ರಾಜ: ಮಗೂ; ಗುರುಗಳು ಏನು ಹೇಳುತ್ತಿರುವರು? ಆಲಿಸಿದೆಯಾ?

ಪ್ರಹ್ಲಾದ: ಕೇಳಿದೆ. ಅವರು ಹೇಳಿದುದು ಅಕ್ಷರಶಃ ಸತ್ಯ. ಬ್ರಾಹ್ಮಣರು ಎಂದಿಗೂ ಸುಳ್ಳು ಹೇಳುವವರಲ್ಲ.

ರಾಜ: ಏನು ಹೇಳಿದೆ? ನೀನು ನಿನ್ನ ವಿನಾಶಕ ಹಟವನ್ನು ಬಿಡ ಲಾರೆಯಾ? ಕಡೇ ಮಾತು. ಆ ಹರಿಯನ್ನು ಮರೆ.

ಪ್ರಹ್ಲಾದ: ಇಲ್ಲ, ಸಾಧ್ಯವಿಲ್ಲ!

ರಾಜ: (ಕೋಪದಿಂದ) ಏನೆಂದೆ? (ಒಂದು ಪೆಟ್ಟು ಕೊಟ್ಟು) ಹರಿ! ಹರಿ!! ಯಾವ ಹರಿಯವನು? ಹರನೆನ್ನು. ಹೂಂ.

ಪ್ರಹ್ಲಾದ: ಇಲ್ಲ. ಹರಿಯೇ ನನ್ನ ದೇವರು.

ರಾಜ: (ಪ್ರಹ್ಲಾದನನ್ನು ತುಳಿಯುತ್ತಾ) ಮಕ್ಕಳು! ಮಕ್ಕಳಿದ್ದರೂ ಚಿಂತೆ. ಇಲ್ಲದಿದ್ದರೂ ಚಿಂತೆ. ತಂದೆಗೆ ಬುದ್ಧಿ ಹೇಳುವ ಮಗನಿವನು. ಸಾಯು. ನಿನ್ನ ಹರಿಯು ಎಲ್ಲಿರುವನು? ನೋಡುವೆನು. (ಮೆಲ್ಲನೆ ಏಳುವಾಗ ಪುನಃ ತುಳಿಯುವನು). ನೀನು ನನ್ನ ಮಗನೇ? ನೀಚ, ಯಾರಲ್ಲಿ? ಇವನನ್ನು ಎಳೆದೊಯ್ದು ಕುಂಡ ಹಾರಿಸಿರಿ. (ಎಳೆದೊಯ್ಯುವರು.)

ಪ್ರಹ್ಲಾದ: (ಅಳುತ್ತಾ) ಹರಿ........ನಾರಾಯಣ............ಕಾಪಾಡು. (ರಾಜನು ಅತ್ತಿತ್ತ ದುಗುಡದಿಂದ ತಿರುಗುತ್ತಿರುವಾಗ ಚಾರಕರು ಪುನಃ ಪ್ರವೇಶಿಸುವರು.)

ರಾಜ: ಪ್ರಹ್ಲಾದನೇನಾದ? ಮಡಿದನೇ?

ಚಾರಕರು: ದೊರೆಯೇ, ಆತನನ್ನು ಜೈದೆವು........ತುಳಿದೆವು........ ಖಡ್ಗದಿಂದ ಕಡಿಯಲೆತ್ನಿಸಿದೆವು. ಯಾವುದೂ ಫಲಕಾರಿಯಾಗಲಿಲ್ಲ.

ರಾಜ: ಮತ್ತೇನು ಮಾಡಿದಿರಿ?

ಚಾರಕರು: ಹಾವುಗಳಿಂದ ಕಚ್ಚಿಸುವಂತೆ ಪ್ರಯತ್ನಿಸಿದೆವು.

ರಾಜ: (ಆಶ್ಚರ್ಯದಿಂದ) ಏನಾಯಿತು?

ಚಾರಕರು: ಅಷ್ಟರಲ್ಲಿ ಹಕ್ಕಿಯೊಂದು ಹಾರಿ ಬಂದೊಡನೆ ಹಾವುಗಳೆಲ್ಲವೂ ಓಡಿಹೋದುವು.

ರಾಜ: ಆಶ್ಚರ್ಯ! ಆ ಮೇಲೆ?

ಚಾರಕರು: ಆನೆಗಳಿಂದ ತುಳಿಸಲು ಯತ್ನಿಸಿದೆವು. ಅದೂ ಫಲಕಾರಿಯಾಗಲಿಲ್ಲ.

ರಾಜ: ಹಾಂ! ಎಲ್ಲಾ ಪ್ರಯತ್ನಗಳೂ ವಿಫಲವಾದುವೇ? ಅವನಿಗೆ ವಿಷ ಪಾನಮಾಡಿಸಿ ಸಾಯಿಸುವೆನು. ಕಯಾದು, ಈ ಕಡೆಗೆ ಬಾ.

ಕಯಾದು: (ಬರುತ್ತಾ) ಏಕೆ ಕರೆಸಿದಿರಿ, ಪ್ರಿಯಾ?

ರಾಜ: ಪ್ರಿಯೇ, ಮಗನ ಸಮಸ್ಯೆ ಬಿಗುವಾಯಿತು. ಹೇಳಿದ ಮಾತುಗಳನ್ನು ಕೇಳದೆ ಕುಲಗೇಡಿಯಂತಾದನು. ಇನ್ನು ಸೈರಿಸಲಾರೆ. ಹರಿಯು ವಿಚಾರವನ್ನು ಮರೆಯೆಂದು ಗದರಿಸಿದರೂ ಕೇಳದೆ ಮತ್ತೂ ಮತ್ತೂ ಹರಿಯೆನ್ನುವನು. ಹರಿಶರಣರು ನನ್ನಲ್ಲಿರಬಾರದು. ಆದುದರಿಂದ....

ಕಯಾದು: ಏನದು?

ರಾಜ: ಪ್ರಿಯೇ, ಈಗ ನಿನ್ನಿಂದ ಒಂದು ಕಾರ್ಯವಾಗಬೇಕಾಗಿದೆ. ಮಾಡುವೆಯಾ?

ಕಯಾದು: ಪತಿಯು ಮಾತನ್ನು ನಡೆಸುವುದು ಸತಿಯಾದವಳ ಕರ್ತವ್ಯ. ಏನಾಗಬೇಕು?

ರಾಜ: ಸರಿ. ಹಾಗಾದರೆ ಪ್ರಹ್ಲಾದನಿಗೆ ವಿಷವುಣಿಸಿ ಕೊಲ್ಲು. ಇದೇ ನೀನು ಮಾಡಬೇಕಾದ ದೊಡ್ಡ ಕಾರ್ಯ.

ಕಯಾದು: (ಅಳುತ್ತಾ) ಸ್ವಾಮಿ, ನನ್ನ ಪರೀಕ್ಷೆಯಿದುವೆ? ಅಲ್ಲ.... ನಿಜವಾಗಿ ಆಡುತ್ತಿರುವಿರೇ?.........ಯಾವ ಕೈಗಳು ಆತನನ್ನು ಕೊಂಡಾಡಿದುವೋ, ಅವುಗಳಿಂದ ಆತನಿಗೆ ವಿಷ ಪಾನಮಾಡಿಸುವುದೇ? ಬೇಡ ಸ್ವಾಮಿ........ಆತನನ್ನು ಕ್ಷಮಿಸಿ ಉಳಿಸಿ.

ರಾಜ: ಕಯಾದು.... ಇದಿರು ಮಾತಾಡದಿರು. ಎಲ್ಲವನ್ನೂ ವಿಚಾರಿಸಿರುವೆನು. ನಿನ್ನಿಂದ ಸಾಧ್ಯವಿಲ್ಲವಾದರೆ ಹಾಗೆಯೇ ಹೇಳು.

ಕಯಾದು: (ಬೆದರಿ) ಆಗಲಿ.

ರಾಜ: ಮರೆಯದಿರು....ಜಾಗ್ರತೆ....(ಹೋಗುವನು).

ಕಯಾದು: (ದುಃಖದಿಂದ) ಹಾ ವಿಧಿಯೇ. ಇದು ನನ್ನ ಪರೀಕ್ಷೆಯೇ? ವಲ್ಲಭನ ಆಜ್ಞೆ!............ಮಗನಿಗೆ ವಿಷಪಾನ!!...........ಅದೂ ನನ್ನ ಈ ಕೈಗಳಿಂದ!!! ಶಿವನೇ, ಎಂತಹ ದುರ್ಧರ ಪ್ರಸಂಗವನ್ನು ತಂದೊಡ್ಡಿದೆ? ನಾನಿಂದು ವಿಷವನ್ನು ಕೊಟ್ಟಲ್ಲಿ ನಿಷ್ಕಲ್ಮಶಹೃದಯಿ ಮಗನಾದರೋ ಹಾಲೆಂದೇ ನಂಬಿ ಕುಡಿಯುವನು. ಈ ರೀತಿ ಆತನು ಮಾಡಿದ ದೃಶ್ಯವನ್ನು ನಾನು ಕಾಣುವುದೆಂದರೆ ಮಾತೆಯಾದ ನಾನಿದ್ದೇನು ಫಲ? ಹೆತ್ತ ತಾಯಿಯ ಕರುಳಿನ ಬೇಗೆಯನ್ನು ಕಲ್ಲುಮನಸ್ಸಿನ ಗಂಡಸರಾದರೋ ಹೇಗೆ ತಿಳಿಯಬಹುದು?

(ಪ್ರಹ್ಲಾದನ ಪ್ರವೇಶ).

ಪ್ರಹ್ಲಾದ: ಅಮ್ಮಾ, ಯಾಕೀರೀತಿಯು ಅಳು? ನಾರಾಯಣನು ನಮ್ಮನ್ನು ಸಲಹಲು ಇರುವಾಗ ಅಳುವುದೇಕಮ್ಮ? (ಕಣ್ಣೀರು ಒರಸುವನು.)

ಕಯಾದು: (ಮಗನನ್ನೆತ್ತಿ ಮುದ್ದಾಡಿ) ಮಗನೇ, ಅಪ್ಪಾ, ಪ್ರಹ್ಲಾದ, ನೀನು ಹೀಗೇಕೆ ಮಾಡುವೆ?

ಪ್ರಹ್ಲಾದ: ನಾನೇನು ಮಾಡಿದೆನು ತಾಯೇ?

ಕಯಾದು: ನಿನ್ನ ತಂದೆಯ ಕಡುವೈರಿಯಾದ ಆ ಹರಿಯನ್ನು ಮತ್ತೂ ಮತ್ತೂ ಏಕೆ ಸ್ಮರಿಸುತ್ತಿರುವೆ? ಛಲವನ್ನು ಬಿಡು. ಹರನನ್ನು ಭಜಿಸು.

ಪ್ರಹ್ಲಾದ: ಅಮ್ಮಾ, ಹಿಂದೆ ನನ್ನ ತಂದೆಯು ಮಗನೆಂಬ ಆ ಬಂಧುತ್ವವನ್ನು ಕಡಿದು ನನ್ನನ್ನು ಕೊಲ್ಲಿಸುವುದಕ್ಕಾಗಿ ಪ್ರಯತ್ನಿಸಿದನು. ಆದರೆ ಶ್ರೀ ಲಕ್ಷ್ಮೀರಮಣನ ದಯೆಯಿಂದ ನಾನು ಬದುಕಿದೆನು. ಆ ಕಾಲದಲ್ಲಿ ಅವನೊಬ್ಬನ ಅನುಗ್ರಹವಿಲ್ಲದಿರುತ್ತಿದ್ದರೆ ನನ್ನ ಗತಿ ಏನಾಗುತ್ತಿತ್ತೋ? ಆ ಕರುಣಾಮಯಿಯನ್ನು ಎಂದೆಂದಿಗೂ ಮರೆಯಲಾರೆ.

ಕಯಾದು: ಮಗನೇ, ನಾನೇನು ಹೇಳಲಿ? ಎಲ್ಲವೂ ಆತನ ಲೀಲೆ. ಬೇಡ ಬೇಡವೆಂದರೂ ಕೇಳದೆ ಹರಿನಾಮಸ್ಮರಣೆ ಮಾಡುವ ನಿನ್ನನ್ನು ತಡೆಯುವುದಾದರೂ ಹೇಗೆ? ಅವನೇ ನಿನ್ನನ್ನು ಕಾಪಾಡಲಿ. ಇದೋ, (ಕಣ್ಣೀರು ಒರೆಸಿಕೊಳ್ಳುತ್ತಾ) ಮಗನೇ, ಇದನ್ನು ಕುಡಿ. (ವಿಷದ ತಟ್ಟೆಯನ್ನು ನಡುಗುತ್ತಿರುವ ಕೈಗಳಿಂದ ಕೊಡುವಳು.)

ಪ್ರಹ್ಲಾದ: (ಕುಡಿಯುತ್ತಾ) ನಾರಾಯಣ....ರಕ್ಷಿಸು....ಕಾಪಾಡು! (ಅಷ್ಟರಲ್ಲಿ ಈ ದೃಶ್ಯವನ್ನು ಮರೆಯಲ್ಲಿ ನೋಡುತ್ತಿದ್ದ ರಾಜನು ಮುಂದೆ ಬರುವನು)

ಕಯಾದು: ಸ್ವಾಮಿ, ವಿಷಪಾನ ಮಾಡಿಸಿದೆ. ಈ ವರೆಗೆ ಏನೊಂದು ತೊಂದರೆಯಾಗಿಲ್ಲ. ಜೀವದಿಂದಿರುವನು. ಯಾವ ಕಾರ್ಯವನ್ನು, ಮಾತೆಯಾದವಳು ಮಾಡಬಾರದಿತ್ತೋ ಆದನ್ನು ನಿಮಗಾಗಿ ನಾನು ಮಾಡಿದೆನು. ಇನ್ನಾದರೂ ಮಗನ ತಳ್ಳಿಗೆ ಹೋಗದಿರಿ. ಅವನು ಮನ ಬಂದಂತೆ ಇರಲಿ.

ರಾಜ: ಪ್ರಿಯೆ, ನಡೆ ನಾನೇನು ಮಾಡಬೇಕೆಂದು ನನಗೆ ಗೊತ್ತಿದೆ. ಯಾರಲ್ಲಿ? ಈತನನ್ನು ಎಳೆದೊಯ್ದು ಸಮುದ್ರಕ್ಕೆ ಬಿಸಾಡಿ ಬನ್ನಿ. (ಚಾರಕರು ಪ್ರವೇಶಿಸುವರು.)

ಚಾರಕರು: ಮಹದಾಜ್ಞೆ! (ಎತ್ತಿಕೊಂಡು ಹೋಗುವರು.)

ಪ್ರಹ್ಲಾದ: (ಗಟ್ಟಿಯಾಗಿ) ಹರಿನಾರಾಯಣ....ದುರಿತ ನಿವಾರಣ.... ಪೊರೆ ಶರಣನನು ಕರುಣಾಕರನೇ!!

ರಾಜ: ಸಾಯನೇ? ಸಮುದ್ರದಲ್ಲಿ ಬಿದ್ದೇನು ಮಾಡಿಯಾನು? ನಿಶ್ಚಯವಾಗಿ ಸಾಯುವನು. ಹಗೆಯಾದ ಹರಿಯನ್ನು ಭಜಿಸುವವರಿಗೆಲ್ಲಾ ಇದೇ ಗತಿ! ಜೈ ಶಂಕರ್! (ಅತ್ತಿತ್ತ ತಿರುಗಾಡುವನು)

ಚಾರಕರು: (ಪ್ರವೇಶಿಸಿ) ಮಹಾರಾಜ, ಪ್ರಹ್ಲಾದನು ಮಡಿದನು.

ರಾಜ: ಭೃತ್ಯರೇ, ಬೇಕಾದ ಉಡುಗೊರೆಗಳನ್ನು ಕೋಶಾಧಿಕಾರಿಗಳಿಂದ ಪಡೆಯಿರಿ. (ಅವರು ತೆರಳುವರು) ಪ್ರಹ್ಲಾದ! ಎಲ್ಲಿರುವಿ' ನಿನ್ನ ಹರಿ ನಿನ್ನನ್ನು ಕಾಪಾಡಿದನೇ? ಹ ಹ್ಹ ಹ್ಹಾ!

ಪ್ರಹ್ಲಾದ: (ಓಡುತ್ತಾ ಬಂದು) ಅಪ್ಪಾ, ನನ್ನನ್ನು ನಾರಾಯಣನು ಬದುಕಿಸಿದನು!

ರಾಜ: ಏನು?

ಪ್ರಹ್ಲಾದ: ಅಪ್ಪಾ, ಹರಿಯ ಭಕ್ತರನ್ನು ಈ ವರೆಗೆ ಜಗತ್ತಿನಲ್ಲಿ ಯಾರು ಕೊಂದವರಿರುವರು? ಅಥವಾ ಹರಿಯ ಶತ್ರುಗಳಾಗಿ ಬದುಕಿದವರಾದರೂ ಯಾರಿಹರು?

ರಾಜ: ಮುಚ್ಚುಬಾಯಿ; ದುಷ್ಟನೇ! ಮಗನೆಂಬ ಸಲುಗೆ ತೋರಿಸಿದಲ್ಲಿ ತಲೆಯನ್ನು ಮೆಟ್ಟಲು ಬಗೆದೆಯಾ? ತಂದೆಗೆ ಬುದ್ಧಿ ಹೇಳುವಷ್ಟು ಪ್ರಾಯ ಬಂತೇ ನಿನಗೆ? ಇದೇ ಎತ್ತಿದ ಕತ್ತಿಯಿಂದ ನಿನ್ನ ಕತ್ತನ್ನು ಕತ್ತರಿಸುವೆನು. ತಡೆಯುವರಾರು? ನೋಡುವೆನು.

ಕಯಾದು: (ಪ್ರವೇಶಿಸಿ) ಸ್ವಾಮಿ, ಸೈರಿಸಿರಿ. ಪ್ರಿಯ ಕಂದಯ್ಯನನ್ನು ಕೊಲ್ಲದಿರಿ. ಇಂತಹ ಕೆಲಸ ಮಾಡಿದರೆ ಅಪಕೀರ್ತಿಯು ಖಂಡಿತವಾಗಿಯೂ ಬರುವುದು; ಬೇಡ, ಕತ್ತಿಯನ್ನು ಕೆಳಗಿಡಿ.

ರಾಜ: ಕಯಾದು, ತಡೆಯಬೇಡ; ಇನ್ನು ಸೈರಿಸೆನು.

ಕಯಾದು: ಪ್ರಾಣೇಶ, ಹಾಗಲ್ಲ. ಎರಡು ಸಾರಿ ಮಾಡಿದ ಕಾರ್ಯವನ್ನು ಮೂರನೇ ಸಾರಿಯೂ ಮಾಡಬೇಕೆಂಬ ಪದ್ಧತಿ. ಆದುದರಿಂದ ಅವನನ್ನು ಇನ್ನೊಮ್ಮೆ ಗುರುಮಠಕ್ಕೆ ಕಳುಹಿಸಿರಿ. ಸರಿ ಹಾದಿಗೆ ಬರುವುದಾದರೆ ಬರಲಿ!

ರಾಜ: (ಸ್ವಗತ) ಏನಾದರಾಗಲಿ! ಇನ್ನೊಮ್ಮೆ ಪ್ರಯತ್ನಿಸೋಣ. (ಪ್ರಕಾಶ) ಯಾರಲ್ಲಿ? ಗುರುಗಳನ್ನು ಬರಮಾಡು.

ಗುರು: (ಪ್ರವೇಶಿಸಿ) ರಾಜಾ; ವಂದನೆಗಳು.

ರಾಜ: ಗುರುಗಳೇ, ಮಗನ ಆಟ ಮಿತಿಮೀರಿತು. ಹೇಗಿದ್ದರೂ ಅವನನ್ನು ಇನ್ನೊಮ್ಮೆ ಕೊಂಡುಹೋಗಿ ಪ್ರಯತ್ನಿಸಿರಿ. ಸರಿ ಹಾದಿಗೆ ಬರುವುದಿದ್ದರೆ ಬರಲಿ.

ಗುರು: ಅಪ್ಪಣೆ (ಪ್ರಹ್ಲಾದನೊಡನೆ ತೆರಳುವನು.) (ಥರದೆ).

ದೃಶ್ಯ ೮

(ರಾಜನು ಕುಳಿತು ಯೋಚಿಸುತ್ತಿರುವನು.)

ಗುರು: (ಪ್ರವೇಶಿಸುತ್ತಾ) ಮಹರಾಜ.... ಬೇಡ.... ನಿನ್ನ ಮಗನ ವಿಚಾರವೇಬೇಡ....ಅವನನ್ನು ತಿದ್ದಲು ಯಾರಿಂದಲೂ ಸಾಧ್ಯವಿಲ್ಲ.... ನೀನೇ ತಿದ್ದಿನೋಡು....ನನಗೆ....ದಯಮಾಡಿ ಹೋಗುವಂತೆ ಅಜ್ಞೆಕೊಡು.

ರಾಜ: ಗುರುಗಳೇ,....ಹೂಂ....ಹೋಗಬಹುದು. (ಪ್ರಹ್ಲಾದನೊಡನೆ) ಪ್ರಹ್ಲಾದ, ಕಡೆಯವರೆಗೆ ನಿನ್ನ ಛಲಪನ್ನೇ ನೀನು ಮೆರೆಸಿದೆಯಲ್ಲವೆ? ನನ್ನ ವಿಚಾರವನ್ನು ನೀನೇನು ಅರಿತಿರುವೆ? ನನ್ನ ಹೆಸರನ್ನು ಕೇಳಿದೊಡನೆ ಅಜಭವರೇ ಅಂಜುತ್ತಿರುವರು. ಮೂರು ಲೋಕಗಳೇ ನಡುಗುತ್ತಿರುವುವು. ನಿನ್ನನ್ನು ಕಂದನೆಂದು ಇಂದಿನವರೆಗೆ ಬಿಟ್ಟಿರುವೆನು, ಈಗ ಹಾಗಲ್ಲ. ನಿನಗೆ ಯಾರ ಬಲವಿದೆಯೆಂದು ನೋಡುವೆನು.

ಪ್ರಹ್ಲಾದ: ನನಗೆ....ಅಪ್ಪಾ....ನನಗೆ....ನಿಮಗೆ....ಎಲ್ಲರಿಗೂ....ಬಲ ವೊಬ್ಬನದೇ....ಅಣುಮಹತ್ಪರಿಪೂರ್ಣನಾದ ಆ ಲಕ್ಷ್ಮೀರಮಣನಾದ ಮಹಾ ವಿಷ್ಣುವೇ ನಮಗೆಲ್ಲರಿಗೂ ರಕ್ಷಕನು.

ರಾಜ: ನೀಚ,ಏನು ಬಗುಳುತ್ತಿರುವೆ? ಯಾವ ವಿಷ್ಣು? ಎಲ್ಲಿರುವನು?

ಪ್ರಹ್ಲಾದ: ಅವನು....ಅಲ್ಲಿ....ಇಲ್ಲಿ....ಎಲ್ಲೆಲ್ಲಿಯೂ ಇರುವನು

ರಾಜ: (ಸಿಟ್ಟಿನಿಂದ) ಎಲ್ಲಿಯೂ ಇರುವನೇ?

ಪ್ರಹ್ಲಾದ: ಹಾಂ, ಇರುವನು!

ರಾಜ: (ಒಂದು ಕಡೆ ತೋರಿಸಿ) ಇಲ್ಲಿರುವನೇ?

ಪ್ರಹ್ಲಾದ: ಇರುವನು.

ರಾಜ: (ಕಂಭದ ಕಡೆಗೆ ತೋರಿಸಿ) ಹಾಗಾದರೆ ಈ ಕಂಭದಲ್ಲಿರುವನೇ?

ಪ್ರಹ್ಲಾದ: ಅಪ್ಪಾ, ಇದ್ದಾನೆ!

ರಾಜ: ಇಲ್ಲವಾದರೆ ನಿನ್ನನ್ನು ಕೊಲ್ಲುವೆನು! ತಿಳಿಯಿತೇ ಮೂರ್ಖ?

ಪ್ರಹ್ಲಾದ: ಹೂಂ!

ರಾಜ: (ಸಿಟ್ಟಿನಿಂದ ಕಂಭವನ್ನು ತುಳಿಯುವನು. ಕಂಭದಿಂದ ನೃಸಿಂಹಾವತಾರ ಹೊರಡುವುದು. ಗಾಬರಿಯಿಂದ) ಅಯ್ಯೋ, ಇದೇನು ಪ್ರವಾದ? ವಿಪರೀತ ಅವತಾರ!!!........(ಅತ್ತಿತ್ತ ಓಡಾಡುತ್ತಾ) ಹೀಗೆಯೇ ಬಿಡುವೆನೇ? ಹಿಡಿದ ಗದೆಯಿಂದ ಇದರ ತಲೆಯನ್ನು ಹುಡಿಹುಡಿಮಾಡುವೆನು. (ಗದೆಯನ್ನು ಹಿಡಿದು ಬಡಿಯಲು ಹೋದಾಗ ಗದೆಯು ಬೀಳುವುದು. ನರಸಿಂಹನು ಆತನನ್ನು ಹಿಡಿದು ಎಳೆದು ಹೊಸ್ತಿಲಲ್ಲಿ ಕುಳಿತು ಕೊಲ್ಲುವನು.)

(ಪರದೆ ಬೀಳುವುದು)

ದೃಶ್ಯ ೯

(ಬೀದಿ—ನಾರದರು ಪ್ರವೇಶಿಸುವರು.)

ನಾರದ: (ನಗುತ್ತ) ನಾರಾಯಣ! ನಾರಾಯಣ! ಮನುಷ್ಯರಿಂದ ಸಾವು ಬರಬಾರದು....ದೇವತೆಗಳಿಂದ ಬರಬಾರದು.... ಹಗಲು ಸಾಯಬಾರದು...ರಾತ್ರಿ ಕೂಡದು.....ಈಗ....ಹಿರಣ್ಯಕಶಿಪುವಿಗೆ ಯಾರಿಂದ ಬಂತು ಸಾವು? (ಅಷ್ಟರಲ್ಲಿ ಪರದೆ ಮೇಲಕ್ಕೆ ಹೋಗುವುದು. ನರಸಿಂಹನು ಉಗ್ರರೂಪದಿಂದಿರುವನು. ಕಯಾದು, ಪ್ರಹ್ಲಾದರೇ ಮೊದಲಾದವರು ಭಯಭಕ್ತಿಯಿಂದ ನಡುಗುತ್ತಿರುವರು.)

ನಾರದ: ನಾರಾಯಣ! ಭಕ್ತ ಪ್ರಹ್ಲಾದ, ನಿನಗಾಗಿ ಅವತಾರಕ್ಕೆ ಬಂದ ನಿನ್ನ ಸ್ವಾಮಿಯ ಉಗ್ರರೂಪವು ಇನ್ನೂ ಶಾಂತವಾಗದೆ ಜಗತ್ತು ಕಂಗೆಡುತ್ತಿದೆ. ಆದುದರಿಂದ ನಿನ್ನೊಡೆಯನನ್ನು ಪ್ರಾರ್ಥಿಸಿ ಜಗತ್ತಿಗೆ ಶಾಂತಿಯಾಗುವಂತೆ ಬೇಡಿಕೋ.

ಪ್ರಹ್ಲಾದ: ಭಗವಾನ್! ಲೋಕಶಾಂತಿಗಾಗಿ ಅವತರಿಸಿದ ನಿನ್ನ ಉಗ್ರರೂಪವನ್ನು ಬದಲಾಯಿಸಿ ಶಾಂತಿಯನ್ನು ತಾಳು. ದಯೆದೋರು ಸ್ವಾಮೀ!

ನೃಸಿಂಹ: ಭಕ್ತವರ ಪ್ರಹ್ಲಾದ, ನಿನ್ನ ಭಕ್ತಿಗೆ ಸಂಪೂರ್ಣ ಮೆಚ್ಚಿರುವೆನು. ನಿನ್ನ ಮನಸ್ಸಿನ ಇಚ್ಛೆ ಏನಿದೆಯೆಂದು ತಿಳಿಸು.

ಪ್ರಹ್ಲಾದ: ಸ್ವಾಮೀ, ನನಗೇನೂ ಬೇಡ! ನಿನ್ನ ದಯೆಯೊಂದೆ ಸಾಕು!

ನೃಸಿಂಹ: ಮಗೂ, ನಿನಗೆ ಶುಭವಾಗಲಿ. ತಂದೆಯ ಪ್ರೇತಕ್ರಿಯೆಗಳನ್ನೆಲ್ಲಾ ಮುಗಿಸಿ ಶೋಣಿತಾಪುರವನ್ನು ಆಳು. ನಿನ್ನ ರಾಜ್ಯವು ಶಾಂತಿಯ ಅಡಿಗಲ್ಲಿನ ಮೇಲೆ ರಚಿಸಿದ ನ್ಯಾಯಧರ್ಮಗಳ ರಾಜ್ಯವಾಗಲಿ!

ಪ್ರಹ್ಲಾದ: ಮಾಧವ, ಮಹದಾಜ್ಞೆ. (ಸ್ತುತಿಸುವನು.)

ಸಂಪೂರ್ಣ.

ಪ್ರತಿ ವಾರವೂ ಕೊಂಡುಕೊಳ್ಳಿರಿ!

"ಒಂದಾಣೆ ಮಾಲೆ"ಯ ಪುಸ್ತಕಗಳು, ಪ್ರತಿ ವಾರ ಪ್ರಕಟವಾಗುತ್ತಿವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. 1954ನೇ ಸಪ್ಟಂಬರದಿಂದ 1957ನೇ ಜುಲೈ ತಿಂಗಳ ಮೊದಲನೆಯ ವಾರದ ವರೆಗೆ 143 ಪುಸ್ತಕಗಳು ಪ್ರಕಟವಾಗಿದ್ದು, ಇನ್ನೂ ಪ್ರತಿ ವಾರ ಒಂದೊಂದು ಹೊಸ ಪುಸ್ತಕ ಹೊರಡುತ್ತಲೇ ಇದೆ.

143 ಅಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, ಒಟ್ಟು 2998 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ 'ಒಂದಾಣೆಮಾಲೆ'ಗೆ ಬರೆಯುತ್ತಾರೆ. 'ಅಶ್ಲೀಲ' ಎಂಬ ಅಂಶವೇ ಒಂದಾಣೆಮಾಲೆ'ಯ ಪ್ರಕಟಣೆಗಳಲ್ಲಿರುವುದಿಲ್ಲ.

'ಒಂದಾಣೆಮಾಲೆ' ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ವಯೋವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಅವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳನ್ನು ಟಪ್ಪಾಲು ದ್ವಾರಾ ತರಿಸಿಕೊಳ್ಳುವವರು ರೂ. 4—8—0ನ್ನು ಮನಿಯಾರ್ಡರ್ ಮೂಲಕ ಕಳಿಸತಕ್ಕದ್ದು. ಡಿಪಾಜಿಟ್ ಇಡುವವರು ಮಾತ್ರ ಏಜನ್ಸಿಗಾಗಿ ಬರೆದುಕೊಳ್ಳತಕ್ಕದ್ದು.

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ-ಉಪಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಿರಿ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ,
ಮಂಗಳೂರು-1.

ANNA PUBLICATIONS, CAR STREET, MANGALORE-1.

Edited, Printed & Published by K. V. Shenoy
at the Prabhat Printers, Ltd., Mangalore.